“ನಾಳೆ ನನ್ನ ಹೆಂಡತಿ ಬರುತ್ತಾಳೆ ಕಣಯ್ಯ. ಇನ್ನು ಒಟ್ಟಿಗೇ ಇರುವುದು. ಅವಳೆಂದರೆ ನನ್ನ ಪ್ರಾಣ ಕಣೋ. ಅವಳಿಗೂ ಅಷ್ಟೆ. ನನ್ನ ಶಕ್ತಿ, ಉಲ್ಲಾಸ, ಉತ್ಸಾಹ ಎಲ್ಲಕ್ಕೂ ಕಾರಣ ಅವಳೇ. ಬದುಕಿನ ಅನಿವಾರ್ಯದ ತಿರುವಿನಲ್ಲಿ ಅವಳು ದೂರ ಉಳಿಯಬೇಕಾಯಿತು. ಬಹುಶಃ ನಾನೂ ಅವಳಿದ್ದಲ್ಲಿಗೆ ಶಿಫ್ಟಾಗುತ್ತೇನೆ. ಈ ವಿಷಾದ ನಾಟಕದ ಪ್ರದರ್ಶನದ ನಂತರ ಭಾವಬಿಂಬವನ್ನು ಬಿಡುವ ಯೋಚನೆ ಇದೆ. ನೀವೆಲ್ಲ ಸೇರಿ ಮುಂದುವರಿಸಿಕೊಂಡು ಹೋಗಿ...” ಹೀಗೆ ಅವಿರತವಾಗಿ ಮಾತನಾಡುತ್ತಲೇ ಇದ್ದರು. ಸೋಫಾದ ಮೇಲೆ ಕುಳಿತಿದ್ದ ಸೂರಿ ಮಲಗಿ ಮಾತು ಕೇಳುತ್ತಿದ್ದಂತೆ ಅಲ್ಲಿಯೇ ಗಾಢನಿದ್ರೆ ಆವರಿಸಿತ್ತು. ಸೂರ್ಯತೇಜರು ಆತನಿಗೆ ಹೊದಿಕೆಯೊಂದನ್ನು ಹೊದೆಯಿಸಿ ತಮ್ಮ ಕೋಣೆಗೆ ಹೋಗಿ ಮಲಗಿದರು.

ಸೂರಿ ಅಲ್ಲಿದ್ದಂತೆಯೇ ಸೂರ್ಯತೇಜರ ಹೆಂಡತಿ ಬಂದರು. ಆದರೆ ಇಷ್ಟು ಸಮಯವಾದರೂ ಅವರ ಹೆಸರೇನೆಂದು ಸೂರಿಯೂ ಕೇಳಲಿಲ್ಲ; ಸೂರ್ಯತೇಜರೂ ಹೇಳಿರಲಿಲ್ಲ. ಬಂದವರೇ ನಾನು ಮಾಧವಿ ಎಂದು ಪರಿಚಯ ಹೇಳಿಕೊಂಡರು ಮತ್ತು ಸೂರಿಯ ಬಗ್ಗೆ ಆ ಮೊದಲೇ ಗೊತ್ತಿರುವಂತೆ ತೀರಾ ಆತ್ಮೀಯರಾಗಿಯೇ ಮಾತನಾಡಿಸಿದರು. ಬಹುಶಃ ಸೂರ್ಯತೇಜರು ತನ್ನ ಬಗ್ಗೆ ಹೇಳಿರಬೇಕು ಅಂದುಕೊಂಡ.

ಹೆಂಡತಿಯನ್ನು ಕಂಡೊಡನೆ ಸೂರ್ಯತೇಜರ ಕಣ್ಣಲ್ಲಿ ಹೊಳೆಯುತ್ತಿದ್ದ ಅಗಾಧ ಪ್ರೀತಿಯನ್ನು ಸೂರಿ ಗುರುತಿಸಿದ. ಅದೆಷ್ಟೋ ವರುಷಗಳ ಬಳಿಕ ಸೇರಿದ ಪ್ರೇಮಿಗಳಂತೆ ಪರಸ್ಪರ ಆಲಂಗಿಸಿಕೊಂಡರು.

“ಇನ್ನು ಸಾಕು ನಾವು ದೂರವಿದ್ದುದು. ಬನ್ನಿ ಹೊರಡುವ. ತಪಸ್ಸಿನಂತೆ ಜೀವನ ಸವೆಸಿದ್ದನ್ನು ನಾನು ಅರಿತಿದ್ದೇನೆ” ಎನ್ನುತ್ತ ಸೂರಿಯೆದುರೇ ಸೂರ್ಯತೇಜರ ಕೈಹಿಡಿದು ಹೊರಟು ನಿಂತರು.

ಸೂರಿಯತ್ತ ನೋಡಿ, “ವಿಷಯವನ್ನು ಎಲ್ಲರಿಗೂ ನೀನೇ ತಿಳಿಸು” ಎಂದು ಮುಗುಳ್ನಕ್ಕರು. ಸೂರ್ಯತೇಜರು ಸೂರಿಯನ್ನು ಒಮ್ಮೆ ಅಪ್ಪಿ, ‘ಚಿಂತಿಸಬೇಡ’ ಎನ್ನುವ ರೀತಿಯಲ್ಲಿ ಸಮಾಧಾನ ಹೇಳುವ ಕಣ್ಣಿಂದ ನೋಡಿ ನಗುಮೊಗದಿಂದಲೇ ಮಾಧವಿಯ ಜೊತೆ ಹೊರಟರು.

ಬಾಗಿಲಲ್ಲಿಯೇ ನಿಂತು ನೋಡುತ್ತಿದ್ದ ಸೂರಿಯ ಕಣ್ಣು ತುಂಬಿ ಬಂತು. ಹತ್ತು ಹೆಜ್ಜೆ ಮುಂದೆ ಹೋಗುತ್ತಿದ್ದವರು ದೂರ ಸಾಗಿ ಕಣ್ಮರೆಯಾಗುತ್ತಿದ್ದಂತೆ ಸೂರಿಯ ಎದೆಯಲ್ಲಿ ನಡುಕ ಹುಟ್ಟಿತು. ಕಣ್ತೆರೆದು ನೋಡುವಾಗ ಬೆವತು ಹೋಗಿದ್ದ. ಎದೆ ಜೋರಾಗಿ ಬಡಿದುಕೊಳ್ಳುತ್ತಲೇ ಇತ್ತು. ಬೆಳಕು ಸಂಪೂರ್ಣವಾಗಿ ಹರಡಿಕೊಂಡಿತ್ತು.

ಎದ್ದವನೇ ಸೂರ್ಯತೇಜರ ಕೋಣೆಗೆ ಹೋದ. ನಗುಮೊಗದಲ್ಲೇ ಕಣ್ಮುಚ್ಚಿ ಮಲಗಿದ್ದ ಸೂರ್ಯತೇಜರನ್ನು ಎಬ್ಬಿಸಲೆಂದು ಅವರ ಮೈಮುಟ್ಟಿದರೆ ದೇಹ ತಣ್ಣಗಾಗಿತ್ತು. ಉಸಿರು ನಿಂತಿತ್ತು. ಎದೆಬಡಿತ ಇನ್ನೂ ಹೆಚ್ಚಿ ಕೋಣೆಯ ಸುತ್ತಲೂ ಕಣ್ಣು ಹಾಯಿಸಿದ. ಆ ಮಂಚದ ಎದುರುಗಡೆ ದಿವಂಗತ ಮಾಧವಿ ಎಂದು ಬರೆದಿರುವ ಭಾವಚಿತ್ರ ಗೋಡೆಯಲ್ಲಿ ನೇತಾಡುತ್ತಿತ್ತು!

## ವಿಷ್ಣು ಭಟ್ಟ ಹೊಸ್ಮನೆ

ಕತೆ – ಕವನ, ಲಘು ಹಾಸ್ಯದ ಲೇಖನ ಮತ್ತು ಇತರ ಲೇಖನಗಳನ್ನು ಬರೆಯುವುದು, ಓದುವುದು, ಚಿತ್ರ ಬಿಡಿಸುವುದು, ಜೇಡಿಮಣ್ಣಿನಲ್ಲಿ ಕಲಾಕೃತಿಗಳನ್ನು ಮಾಡುವುದು ಲೇಖಕರ ಹವ್ಯಾಸ. ಹುಟ್ಟಿದ ಊರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲ್ಲೂಕಿನ ಗುಂಡಿಬೈಲ್ ಎಂಬ ಹಳ್ಳಿ. ಪ್ರಸ್ತುತ ಉಡುಪಿಯ ಆತ್ರಾಡಿ ಗ್ರಾಮದಲ್ಲಿ ವಾಸ.